# ಹರಿಣಿ ಎನ್ನುವ ನಂದಾದೀಪ

**ಹರಿಣಿ ಅವರಿಗೆ 'ರಾಜ್‌ಕುಮಾರ್ ಪ್ರಶಸ್ತಿ' ಸಲ್ಲುವ ಮೂಲಕ ಪ್ರಶಸ್ತಿಯ ಘನತೆ ಹೆಚ್ಚಾಗಿದೆ.**



'ನಾಂದಿ' ಚಿತ್ರದಲ್ಲಿ ರಾಜಕುಮಾರ್ ಹಾಗೂ ಹರಿಣಿ

ಚಲನಚಿತ್ರ ಪ್ರಶಸ್ತಿಗಳು ಒಂದಲ್ಲಾ ಒಂದು ವಿವಾದಕ್ಕೆ ತುತ್ತಾಗುತ್ತಿರುವ ಸಂದರ್ಭದಲ್ಲಿ, ಹರಿಣಿ ಅವರಿಗೆ 2015ನೇ ಸಾಲಿನ ರಾಜ್‌ಕುಮಾರ್ ಪ್ರಶಸ್ತಿ ಸಂದಿರುವುದು ಪ್ರಶಸ್ತಿಯ ಘನತೆಯನ್ನು ಹೆಚ್ಚಿಸುವಂತಿದೆ. ನಟಿಯಾಗಿ, ನಿರ್ಮಾಪಕಿಯಾಗಿ ಹರಿಣಿ ಅವರದು ಕನ್ನಡ ಚಿತ್ರರಂಗಕ್ಕೆ ಅನನ್ಯ ಕೊಡುಗೆ.

ಹರಿಣಿ ಎಂದಕೂಡಲೇ ಚಿತ್ರರಸಿಕರಿಗೆ ಮೊದಲು ನೆನಪಾಗುವ ಹೆಸರು ಕನ್ನಡದ ಅತ್ಯುತ್ತಮ ಚಿತ್ರಗಳಲ್ಲೊಂದಾದ 'ನಾಂದಿ' (1964). ಎನ್. ಲಕ್ಷ್ಮೀನಾರಾಯಣ್ ನಿರ್ದೇಶನದ ಈ ಸಿನಿಮಾ ಕನ್ನಡದಲ್ಲಿ ಪ್ರಯೋಗಶೀಲ ಚಿತ್ರಗಳಿಗೆ ಮುನ್ನುಡಿ ಬರೆಯಿತಲ್ಲದೆ, ಲಂಡನ್‌ನ ಕಾಮನ್‌ವೆಲ್ತ್ ಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡ ಕೀರ್ತಿಗೂ ಒಳಗಾಯಿತು. ಹರಿಣಿ ಹಾಗೂ ವಾದಿರಾಜ್–ಜವಾಹರ್ ಸಹೋದರರು ನಿರ್ಮಿಸಿದ ಈ ಚಿತ್ರ ಕಿವುಡು–ಮೂಕರ ಕುರಿತ ವಿಶಿಷ್ಟ ಕಥೆ ಒಳಗೊಂಡಿತ್ತು. ರಾಜಕುಮಾರ್ ಹಾಗೂ ಕಲ್ಪನಾ ಅವರೊಂದಿಗೆ ಹರಿಣಿ ಕೂಡ 'ನಾಂದಿ'ಯ ಮುಖ್ಯಪಾತ್ರದಲ್ಲಿ ನಟಿಸಿದ್ದರು. ಮೂಕಿ ಹಾಗೂ ಕಿವುಡಿಯಾಗಿ ಅವರ ಅಭಿನಯ ಸಹೃದಯರ ಮೆಚ್ಚುಗೆಗೆ ಪಾತ್ರವಾಗಿತ್ತು.



'ನಾಂದಿ'ಯ ಘನ ಗಾಂಭೀರ್ಯದ ಹರಿಣಿ ಚಿತ್ರರಂಗ ಪ್ರವೇಶಿಸಿದ್ದು ಗ್ಲಾಮರಸ್ ನಟಿಯಾಗಿ ಎನ್ನುವುದು ವಿಶೇಷ. 'ಮಹಾತ್ಮ ಪಿಕ್ಚರ್ಸ್'ನ ಶಂಕರ್‌ಸಿಂಗ್‌ರ 'ಜಗನ್ಮೋಹಿನಿ' (1951) ಅವರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಸಿನಿಮಾ. ಅವರ ಮಾದಕ ಸೌಂದರ್ಯದ ಕಾರಣದಿಂದಾಗಿ 'ಜಗನ್ಮೋಹಿನಿ' ಪ್ರೇಕ್ಷಕರನ್ನು ಸೆಳೆದಿತ್ತು. ಕನ್ನಡ ಸಿನಿಮಾಗಳ ಬಗ್ಗೆ ಪ್ರೇಕ್ಷಕರು ಅಷ್ಟೇನೂ ಉತ್ಸುಕರಲ್ಲದ ಕಾಲದಲ್ಲಿ, ಹರಿಣಿ ಅವರ ರತಿವರ್ಚಸ್ಸಿನ ಕಾರಣದಿಂದಲೇ ಪ್ರೇಕ್ಷಕರು ಚಿತ್ರಮಂದಿರಗಳಿಗೆ ಮುಗಿಬಿದ್ದಿದ್ದರು.

ಚೆಲುವು–ವಯ್ಯಾರದ ಮೂಲಕ ವೃತ್ತಿಜೀವನ ಆರಂಭಿಸಿದರೂ, ನಂತರದ ದಿನಗಳಲ್ಲಿ ಹರಿಣಿ ಪ್ರಬುದ್ಧ ನಟಿಯಾಗಿ ರೂಪುಗೊಂಡಿದ್ದು ವಿಶೇಷ. 'ಕನ್ಯಾದಾನ', 'ನಂದಾದೀಪ', 'ಇದೇ ಮಹಾಸುದಿನ', 'ವಿಚಿತ್ರ ಪ್ರಪಂಚ', 'ಸೌಭಾಗ್ಯಲಕ್ಷ್ಮಿ', 'ಗಂಧರ್ವ ಕನ್ಯಾ', 'ಧರ್ಮವಿಜಯ', 'ಶಿವಗಂಗೆ ಮಹಾತ್ಮೆ', 'ಸರ್ವಜ್ಞಮೂರ್ತಿ', 'ರತ್ನಮಂಜರಿ', 'ವಿಧಿವಿಲಾಸ' – ಹೀಗೆ ಹರಿಣಿ ಅಭಿನಯದ ಒಂದೊಂದು ಚಿತ್ರವೂ ನಟಿಯಾಗಿ ಅವರು ಸಾಗಿಬಂದ ದಾರಿಯನ್ನು ಸೂಚಿಸುವಂತಿವೆ. ಪೋಷಕ ನಟಿಯರಷ್ಟೇ ಖಳಛಾಯೆಯ ಸ್ತ್ರೀಪಾತ್ರಗಳನ್ನು ನಿರ್ವಹಿಸುತ್ತಿದ್ದ ದಿನಗಳಲ್ಲಿ, 'ಆಶಾಸುಂದರಿ' ಚಿತ್ರದಲ್ಲಿ ಋಣಾತ್ಮಕ ಛಾಯೆಯ ಪಾತ್ರದಲ್ಲಿ ಅವರು ನಟಿಸಿದ್ದು ವಿಶೇಷ.

'ಜಗನ್ಮೋಹಿನಿ' ಚಿತ್ರಕ್ಕೂ ಮೊದಲೇ ಹರಿಣಿ ಬಾಲನಟಿಯಾಗಿ ಕೂಡ ನಟಿಸಿದ್ದರು. ಐದು ವರ್ಷದ ಬಾಲಕಿಯಾಗಿದ್ದಾಗಲೇ 'ಹರಿದಾಸ್' ತಮಿಳು ಚಿತ್ರದಲ್ಲಿ ಬಾಲಕೃಷ್ಣನಾಗಿ ಕಾಣಿಸಿಕೊಂಡಿದ್ದರು. ತಮಿಳಿನ 'ಪುಣ್ಯವತಿ' ಅವರು ಪೂರ್ಣ ಪ್ರಮಾಣದ ನಾಯಕಿಯಾಗಿ ಅಭಿನಯಿಸಿದ ಚೊಚ್ಚಲ ಸಿನಿಮಾ. ಶಂಕರ್‌ಸಿಂಗ್‌ರ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಿತರಾದ ಅವರು, ನಂತರದ ದಿನಗಳಲ್ಲಿ ಕನ್ನಡ ಚಿತ್ರೋದ್ಯಮದಲ್ಲೇ ಹೆಚ್ಚು ತೊಡಗಿಕೊಂಡರು.

'ವಿಜಯ ಭಾರತಿ' ಸಂಸ್ಥೆಯಿಂದ ಅವರು ಕೆಲವು ವಿಶಿಷ್ಟ ಚಿತ್ರಗಳನ್ನೂ ನಿರ್ಮಿಸಿದ್ದಾರೆ. 'ನಮ್ಮ ಮಕ್ಕಳು', 'ಸೀತಾ', 'ನಾ ಮೆಚ್ಚಿದ ಹುಡುಗ', 'ಸೀತೆಯಲ್ಲ ಸಾವಿತ್ರಿ' – ಅವರ ನಿರ್ಮಾಣದ ಕೆಲವು ಚಿತ್ರಗಳು.

ಅಂದಹಾಗೆ, ಹರಿಣಿ ಉಡುಪಿಯವರು (ಜನನ: 1937). ಅವರ ತಂದೆ ಶ್ರೀನಿವಾಸ ಉಪಾಧ್ಯಾಯರು ಗಾಂಧಿವಾದಿ. ಬರೋಡಾ ವಿಶ್ವವಿದ್ಯಾಲಯದಲ್ಲಿ ಗ್ರಂಥಪಾಲಕರಾಗಿದ್ದ ಉಪಾಧ್ಯಾಯರು, ತಮ್ಮ ಉದ್ಯೋಗ ತ್ಯಜಿಸಿ ಬಂದು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರು. ಉಡುಪಿಯಲ್ಲಿ ಉದ್ಯಮ ನಡೆಸುತ್ತಿದ್ದ ಅವರು, ನಷ್ಟ ಉಂಟಾದ್ದರಿಂದ ಹೊಸ ಅವಕಾಶ ಹುಡುಕಿಕೊಂಡು ತಮಿಳುನಾಡಿನ ಮಧುರೈಗೆ ಹೋಗಿ ನೆಲೆಸಿದರು. ಹಾಗಾಗಿ, ಕರ್ನಾಟಕ ಮಾತ್ರವಲ್ಲದೆ ತಮಿಳು ಪರಿಸರ ಕೂಡ ಹರಿಣಿ ಅವರನ್ನು ಪೋಷಿಸಿದೆ. ಎಂಬತ್ತರ ಹೊಸ್ತಿಲಲ್ಲಿರುವ ಹಿರಿಯ ಕಲಾವಿದೆಗೆ 'ರಾಜ್‌ಕುಮಾರ್ ಪ್ರಶಸ್ತಿ' ಸಂದಿರುವುದು ಅರ್ಥಪೂರ್ಣ.

■ ರಘು